ಓ.ಎಸ್ 127/2020 ಡಿ.ಡಬ್ಲೂಃ 1

83/2021

**<u>ಸಾಕ್ಷಿಯನ್ನು ದಿಃ 06.12.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ ಎಂ.ಎಸ್ ವಕೀಲರಿಂದಃ-</u>**

ನಮ್ಮ ತಂದೆ ಶಂಕ್ರಪ್ಪ ನವರರಿಗೆ ಮೂವರು ಮಕ್ಕಳು. ಈಶ್ವರಪ್ಪ ಮತ್ತು ಸೋಮಪ್ಪ ಇಬ್ಬರೂ ನನ್ನ ಸಹೋದವರರು. ಓ.ಎಸ್ ನಂ. 127/2020 ರ ದಾವೆಯಲ್ಲಿ ಸೋಮಪ್ಪ ನವರು ನನ್ನ ಮೇಲೆ ಮತ್ತು ಈಶ್ವರಪ್ಪ ರವರ ಮೇಲೆ ವಿಭಾಗ ಕೋರಿ ಕೇಸ್ ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಮೂದಿಸಿರುವ ಐಟಂ ನಂ. 1 ರಿಂದ 12 ರ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ. ಸದರಿ ಸ್ವತ್ತುಗಳಲ್ಲಿ ಈಶ್ವರಪ್ಪ ನವರಿಗೆ ಸಮಭಾಗದ ಹಕ್ಕು ಇದೆ ಎಂದರೆ ಸರಿ.

ನಾನು ಮತ್ತು ನನ್ನ ತಾಯಿ ಪಾರ್ವತಮ್ಮ ಓ.ಎಸ್ ನಂ. 127/2020 ರಲ್ಲಿನ ಐಟಂ ನಂ. 1 ರಿಂದ 10 ಕ್ಕೆ ಸಂಬಂಧಿಸಿದಂತೆ ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಈಶ್ವರಪ್ಪ ರವರು ಪಕ್ಷಗಾರರು ಅಲ್ಲ ಮತ್ತು ಅವರಿಗೆ ಯಾವುದೆ ಷೆಡ್ಯೂಲ್ ಅನ್ನು ನಮೂದಿಸಿಲ್ಲ ಎಂದರೆ ಸರಿ. ಈಶ್ವರಪ್ಪ ಮತ್ತುಸ ಸೋಮಪ್ಪ ವರವರಿಗೆ ಭಾಗ ಕೊಡ ಬೇಕಾಗುತ್ತದೆ ಎಂದು ನಾನು ಮತ್ತು ನನ್ನ ತಾಯಿ ಸೇರಿಕೊಂಡು ದಿಃ 24.06.2020 ರ ಪಾಲು ವಿಭಾಗ ಪತ್ರವನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗ ಪತ್ರ ಮಾಡಿಕೊಂಡ ವಿಚಾರ ಗೊತ್ತಾದ ನಂತರ ಈಶ್ವರಪ್ಪನವರು ನನಗೆ ಮತ್ತು ನನ್ನ ತಾಯಿಗೆ ನೊಟೀಸು ಕಳುಹಿಸಿದ್ದರು ಎಂದರೆ ಸರಿ. ಸದರಿ ನೊಟೀಸು ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಡಿ.35** ಎಂದು ಗುರುತಿಸಲಾಯಿತು. ಸದರಿ ನೊಟೀಸ ಅನ್ನು ನಾನೆ ಸಹಿ ಮಾಡಿ ತೆಗೆದುಕೊಂಡಿರುತ್ತೇನೆ. ಆ ಬಗ್ಗೆ ಸ್ವೀಕೃತಿ ನೋಡಿ ಗುರುತಿಸಿದ್ದು, ಅದನ್ನು ನಿಡಿ. 36 ಎಂದು ಗುರುತಿಸಲಾಯಿತು. ಆ ರೀತಿ ಈಶ್ವರಪ್ಪ ರವರು ನೊಟೀಸು ಕೊಟ್ಟಿದ್ದರೂ ನಾನಾಗಲಿ ನನ್ನ ತಾಯಿಯಾಗಲಿ ವಿಭಾಗ ಪತ್ರವನ್ನು ರದ್ದುಪಡಿಸಿಕೊಳ್ಳಲಿಲ್ಲ ಎಂದರೆ ಸರಿ. ಹಾಗೆ ವಿಭಾಗ ಪತ್ರವನ್ನು ರದ್ದು ಪಡಿಸಬೇಕೆಂದು ನೊಟೀಸು ಕೊಟ್ಟ ನಂತರ ಸೋಮಪ್ಪ,

ಈಶ್ವರಪ್ಪ ಮತ್ತು ಸುಮೇಶ್ ರವರಿಗೆ ಸೇರಿದ ಸ್ವತ್ತುಗಳಿಗೆ ಸಂಬಂಧಿಸಿದಂತೆ ಓ. ಎಸ್ 83/2021 ರಂತೆ ಇನ್ನೊಂದು ದಾವೆ ಹಾಕಿರುತ್ತೇನೆ ಎಂದರೆ ಸರಿ.

ಈಶ್ವರಪ್ಪ ನವರಿಗೆ ದಿಃ 17.04.1994 ರಂದು ಪ್ರತ್ಯೇಕವಾಗಿ 4 ಎಕರೆ ಜಮೀನು ಸಾಗುವಳಿ ಮೂಲ ಮಂಜೂರಾಗಿರುತ್ತದೆ ಎಂದರೆ ತಂದೆ ಇರುವಾಗಲೆ ಅದನ್ನು ಮಾಡಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ತಂದೆ ಹೆಸರಿನಲ್ಲಿ ಜಾಸ್ತಿ ಜಮೀನು ಇದ್ದ ಕಾರಣ ಸೋಮಪ್ಪ ನವರ ಹೆಸರಿಗೆ 4 ಎಕರೆ ಮತ್ತು ಈಶ್ವರಪ್ಪ ನವರ ಹೆಸರಿಗೆ 4 ಎಕರೆ ಜಮೀನನ್ನು ಮಾಡಿಸಿಕೊಟ್ಟಿದ್ದರು ಎನ್ನುತ್ತಾರೆ. ಹಾಗೆ ಜಮೀನನ್ನು ಮಾಡಿಸಿಕೊಟ್ಟಿದ್ದರು ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ. ಓ.ಎಸ್ 83/2021 ರ ದಾವೆಯಲ್ಲಿ ಐಟಂ ನಂ. 3 ರ ಸರ್ವೆ ನಂ. 35 ರಲ್ಲಿ 4 ಎಕರೆ ಜಮೀನು ಪ್ರತ್ಯೇಕವಾಗಿ ಈಶ್ವರಪ್ಪ ನವರ ಹೆಸರಿಗೆ ಸಾಗುವಳಿ ಮಂಜೂರಾಗಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಈಶ್ವರಪ್ಪ ನವರು ಸುಮಾರು 60 ತೆಂಗಿನ ಮರಗಳನ್ನು ಹಾಕಿರುತ್ತಾರೆ ಎಂದರೆ ತಂದೆಯವರು ಹಾಕಿರುತ್ತಾರೆ ಎನ್ನುತ್ತಾರೆ. ಸದರಿ ಜಮೀನಿನಲ್ಲಿ 1000 ಸಿಲ್ವರ್ ಮರಗಳನ್ನು ಈಶ್ವರಪ್ಪ ನವರು ಹಾಕಿರುತ್ತಾರೆ ಎಂದರೆ ಸಾಕ್ಷಿ ತಂದೆಯವರು ಹಾಕಿದ್ದರು ಈಶ್ವರಪ್ಪ ನವರು ಅದನ್ನು ಕಡಿದು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಕರಿ ಮೆಣಸಿನ ಬಳಿಳ ಹಬ್ಬಿಸಿರುತ್ತಾರೆ ಎಂದರೆ ತಂದೆಯವರೆ ಮಾಡಿದ್ದು ಇರುತ್ತದೆ ಎನ್ನುತ್ತಾರೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಈಶ್ವರಪ್ಪ ನವರು ಹಣಗೋಡು ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಸಾಲ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 4 ಎಕರೆ ಜಮೀನನ್ನು ಆಧಾರ ಮಾಡಿ ಟ್ರ್ಯಾಕ್ಟರ್ ಸಾಲವನ್ನು ಸಹ ಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸದರಿ 4 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡಿದ್ದರು ಎಂದು ತೋರಿಸಲು ಅಲ್ಲಿ ತೆಂಗು, ಸಿಲ್ವರ್ ಮರಗಳನ್ನು ಬೆಳೆಸಿದ್ದರು ಎಂದು ತೋರಿಸಲು ದಾಖಲೆ ಇಲ್ಲ.

ಓ.ಎಸ್ ನಂ. 83/2021 ರ ಐಟಂ ನಂ. 3 ಮತ್ತು 5 ರ ಸ್ವತ್ತುಗಳು ಈಶ್ವರಪ್ಪ ನವರ ಸ್ವಯಾರ್ಜಿತ ಸ್ವತ್ತುಗಳು ಎಂದರೆ ಸರಿಯಲ್ಲ. ಈಶ್ವರಪ್ಪ ನವರು ದಿಃ 24.06.2020 ರ ವಿಭಾಗ ಪತ್ರ ರದ್ದು ಪಡಿಸುವಂತೆ

**ಓ.ಎಸ್ 127/2020** **ಡಿ.ಡಬ್ಲೂಃ 1**

**83/2021**

ನೋಟೀಸು ಕೊಟ್ಟ ನಂತರ ಓ.ಎಸ್ ನಂ. 83/2021 ರ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸುವುದಕ್ಕೂ ಮೊದಲು ಓ.ಎಸ್ ನಂ. 83/2021 ದಾವಾ ಸ್ವತ್ತು ಗಳಿಗೆ ಸಂಬಂಧಿಸಿದಂತೆ ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಸದರಿ ಸ್ವತ್ತುಗಳು ಈಶ್ವರಪ್ಪ ಮತ್ತು ಸೋಮಪ್ಪ ನವರ ಸ್ವಯಾರ್ಜಿತ ಸ್ವತ್ತುಗಳು ಆದರೂ ಸಹ ಪಿತ್ರಾರ್ಜಿತ ಸ್ವತ್ತುಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಓ.ಎಸ್ ನಂ. 83/2021 ರಲ್ಲಿನ ದಾವಾ ಸ್ವತ್ತುಗಳು ಪ್ರತಿವಾದಿಯರಾದ ಸೋಮಪ್ಪ, ಈಶ್ವರಪ್ಪ ಮತ್ತು ಸಮೇಶ್ ರವರ ಸ್ವತ್ತುಗಳು ಆದ ಕಾರಣ ದಿಃ 24.06.2020 ರ ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ** ಓ.ಎಸ್ 83/2021 ರಲ್ಲಿನ 3 ನೇ ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.